Regd No M 1299 Sri ತಾ|| 8—10—51

SATYAVADI = 35th Year

ಸತ್ಯವಾದಿ

ಸ್ಥಾಪಕರು- ಅರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಪೌರಸಭೆ

ದಸರೆಗಾಗಿ ಹೊರಗಿನಿಂದ ಬರುವ ಜನರಿಗಾಗಿ ಬಸ್ ಟರ್ಮಿನಸ್ ಮತ್ತು ಟ್ರೌ ಹಾಲ್‌ಸಲ್ಲಿ ತಾತ್ಕಾಲಿಕ ನಲ್ಲಿಗಳನ್ನು ಹಾಕಲಾಗಿದೆ ದೊಡ್ಡಕೆರೆಯಲ್ಲಿ ತಾತ್ಕಾಲಿಕ ಕಕ್ಕಸುಗಳನ್ನು ಕಟ್ಟಿಸಲಾಗಿದೆ ಎಂದು ಮೈಸೂರು ಪೌರಸಭೆ ಅಧ್ಯಕ್ಷರಾದದ ಶ್ರೀ ಟಿ ನರಸಿಂಹಯ್ಯಂಗಾರ್ಯರು ಮೊನ್ನೆಯ ಅಧಿವೇಶನದಲ್ಲಿ ತಿಳಿಸಿದರು.

ದಸರೆಗಾಗಿ ಬರುವ ಜನರಿಗೆ ಪಡಿತರ ಒದಗಿಸಬೇಕು ಮತ್ತು ಈ ಸಂಬಂಧ ಪಟ್ಟ ಸರ್ಕಾರಿ ಪ್ರಕಟಣೆ ಪಡಿಲವಾಗ ಬೇಕು ಎಂಬ ತಿದ್ದುಪಡಿ ನಿರ್ಣಯ ಸರ್ವಾನುಮತದಿಂದ ಅಂಗೀಕೃತವಾಯಿತು ಡಾ|| ಬಿ ಜಿ ದಾಸ್‌ರವರು ನಿರ್ಣಯವನ್ನು ಮಂಡಿಸಿದರು.

ಮೈಸೂರು ನಗರದಲ್ಲಿ ಮನೆಗಳ ಕುರಿತು ಸರ್ವೆ ಮಾಡಬೇಕೆಂಬ ಶ್ರೀ ಟಿ ರಾಜಗೋಪಾಲಯ್ಯಂಗಾರ್ಯರ ನಿರ್ಣಯ ಬೇಗ ಪರಿಶೀಲನೆ ಆಗುವ ಭರವಸೆ ಮೇಲೆ ವ್ಯವಸ್ಥಾಪಕ ಸಮಿತಿಗೆ ನಿರ್ಣಯವನ್ನು ಒಪ್ಪಿಸಲಾಯಿತು.

ಗುರುವಾರ ಬೆಳಿಗ್ಗೆ 8 ಗಂಟೆಗೆ ಸಭೆ ಮುಂದೂಡಲಾಯಿತು.

ದಿವ್ಯವಾಣಿ

ಕೆಟ್ಟ ಜನರ ಜೊತೆಯಲ್ಲಿರುವದಕ್ಕಿಂತ ಒಂಟಿಯಾಗಿರುವುದೇ ಉತ್ತಮ.

— ಚಿಂಗ್ ಚೌ

ರೆಡ್ಡಿಗಳೊಡನೆ ಸಂದರ್ಶನ

ಡಾ|| ಬಿ ಜಿ ದಾಸ್‌ರವರ ನೇತೃತ್ವದಲ್ಲಿ ಮೈಸೂರು ಪಡಿತರ ಕಾರ್ಡುದಾರರ ಸಂಘದ ನಿಯೋಗವೊಂದು ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರನ್ನು ಕಂಡು, ದಸರೆಗೆ ಆಗಮಿಸುವ ಜನರಿಗೆ ಪಡಿತರ ಒದಗಿಸಬೇಕೆಂದು ಪ್ರಾರ್ಥಿಸಲು ದಸರೆಯ ಕೊನೆ ನಾಲ್ಕು ದಿನಸಕ್ಕೆ ಪಡಿತರ ಒದಗಿಸುವದಾಗಿ ಮುಖ್ಯ ಮಂತ್ರಿಗಳು ತಿಳಿಸಿದರೆಂದು ಗೊತ್ತಾಗಿದೆ.

ಆಯುಧ ಪೂಜೆ ಪ್ರಯುಕ್ತ ನಾಳೆ ನಮ್ಮ ಕಾರ್ಯಾಲಯಕ್ಕೆ ರಜ

ಮೋತಿಲಾಲ್

5—10—51 ರಿಂದ

ನಿಮ್ಮ, ಶೇಖರ್, ಸುಲೋಚನ ಚಟರ್ಜಿ

ಪಾತ್ರವಹಿಸಿರುವ

ಬಡೀ ಬಹು

ಅಮೋಘ ಹಿಂದಿ ಚಿತ್ರ ದಿನ 3 ಆಟಗಳು

ಬೆಳಗಿನ ಪ್ರದರ್ಶನ

2-10-51 ರಿಂದ 7 ದಿನಗಳು

ಕಿಂಗ್ ಆಫ್ ದಿ ರಾಕೆಟ್‌ಮೆನ್

ಅಪೇರ—

ಜಯಪ್ರದ 2 ನೆ ವಾರ

ಸರ್ವಾಧಿಕಾರಿ

ಮಹೋನ್ನತ ತಮಿಳು ಚಿತ್ರ

ಪಾತ್ರ — ಅಂಜಲಿದೇವಿ, ನಾಗಯ್ಯ, ರಾಮಚಂದ್ರ್, ನಂಬಿಯಾರ್

ಪ್ರತಿ ದಿನ 3 ಆಟಗಳು

ಬೆಳಗಿನ ಪ್ರದರ್ಶನ 4—10—51 ರಿಂದ

ONE MILLION B. C.

ಉಡ್‌ಲಾಂಡ್

ಶಿ ನ

5—10—51 ರಿಂದ

ಪ್ರತಿ ಸಂಸಾರವೂ ನೋಡಲೇಬೇಕಾದ

ಅಮೋಘ ಪೌರಾಣಿಕ ಹಿಂದಿ ಚಿತ್ರ

ಶ್ರೀ ಗಣೇಶ ಜನ್ಮ

ನಾರದ ರಾಯರು, ತ್ರಿಲೋಕ್ ಕಪೂರ

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ತಾ|| 10 ರಿಂದ

— ಅ ಬಿ ಡಾ —

ಪ್ರಮುಖ ಸುದ್ದಿಗಳು

ಗೋವಾದಲ್ಲಿ ಭಾರತ ಭ್ಯಾಂಕುಗಳ ಶಾಖೆಗಳಿಡಲು ಅಲ್ಲಿಯ ಸರಕಾರ ಅನುಮತಿ ಕೊಡಲು ತಿರಸ್ಕರಿಸಿದೆ

ಮೈಸೂರು— ಸಂಸ್ಥಾನದ ಶಾಸನ ಸಭಾಧಿವೇಶನವು ಇಂದು ಪ್ರಾರಂಭವಾಯಿತು

ನವದೆಹಲಿ— ಪೊರ್ಚ್ ಬಂಗಾಳಾದಲ್ಲಿ ಮುಸ್ಲಿಮೇತರರ ವೇಲೆ ನಾನಾ ತರಹದ ಕಂದಾಯ ವಿಧಿಸಲಾಗುತ್ತಿದೆಯೆಂದು ಪಾರ್ಲಿಮೆಂಟಿನಲ್ಲಿ ವಿದೇಶಾಂಗ ಮಂತ್ರಿ ತಿಳಿಸಿದರು.

ಅಲಹಾಬಾದ್— ದಂಗೇ ಕಾಲದಲ್ಲಿ ಬ್ರಿಟಿಷರಿಂದ ೬೦೦ ಜನರು ನೇಣು ಹಾಕಲ್ಪಟ್ಟವರೆಂದು ಹೇಳಿ ಬೇವಿನಗಿಡ — ಅದನ್ನು ಈಗ ಮಂತ್ರಿ ಇಲಾಖೆಯವರು ಕಡಿದುಹಾಕಬೇಕೆಂದಿದ್ದರು — ಆದರೆ ಜನರು ಅದು ಹಾಗೇ ಉಳಿದಿರಲೆಂದು ಪ್ರಾರ್ಥಿಸಿದ್ದರಿಂದ ಅದನ್ನು ಉಳಿಯಗೊಟ್ಟರು !

ಮೈಸೂರು ರೇಸೆಸ್

7—10—51 ರ ಫಲಿತಾಂಶ

1 ಆರ್ ಡಬ್ಲ್ಯು ಐ ಟಿ ಸಿ ಕಪ್

ಫ್ಲೈಯಿಂಗ್ ಪುಸ್ಸ

ಟೋಟು — ವಿನ್ ರೂ 10 ಪ್ಲೇಸ್ ರೂ 7, 7—8—0

2 ರಾಜರ್ಷಿ ಪ್ಲೇಟ್

ಹಮಾಕ್, ಇಂಪೀರಿಯಲ್ ವೆಜಸ್ಟ

ಟೋಟು — ವಿನ್ ರೂ 7 ಪ್ಲೇಸ್ ರೂ 7—8—0, ರೂ 17—8—0

3 ದಳವಾಯಿ ಕಪ್

ಪಾಸ್ಟ್ ವೋಸ್ಟ್, ಗೋಲ್ಡ್‌ಬಾಯ್

ಟೋಟು — ವಿನ್ ರೂ 6—8—0, 16—8—0, ಪ್ಲೇಸ್ ರೂ 8. 11

4 ಕೈಲಾಸ್ ಪ್ಲೇಟ್ ಡಿ 2

ಕೋಲ್ಡ್ ಸೋಲ್ಡರ್, ಯುರಲೇಲ್ ನೈಚಾನ್ಸ್,

ಟೋಟು — ವಿನ್ ರೂ 25-8-0, ಪ್ಲೇಸ್ ರೂ 9, 7, 13

5 ಆರ್ ಸಿ ಟಿ ಸಿ ಕಪ್

ಅಂಟಿಸಿಡೆನ್ಸ್, ಲೂಡ್ಸ್, ಬಿಗ್ ಐಡಿಯ

ಟೋಟು — ವಿನ್ ರೂ 13-8-0, ಪ್ಲೇಸ್ ರೂ 5—8—0 8, 5—8—0

6 ಕೈಲಾಸ್ ಪ್ಲೇಟ್, ಡಿ 1

ವಾರ್ಟ್‌ಡೈಸಿ, ಗೋಲ್ಡ್ ಲೀಡ್ ಸೆಂಟಿನೇಲ

ಟೋಟು — ವಿನ್ ರೂ 30, ಪ್ಲೇಸ್ ರೂ 8, 8, 11—8—0

ಟ್ರಬಲ್ ಈವೆಂಟು

37 ಟಿಕೀಟುಗಳಿಗೆ ತಲಾ ರೂ 113

ಮಲ್ಲನ ಮುತ್ತು

ಹೇಳಿದ್ದೇ ಶಾಸ್ತ್ರ ಮಾಡಿದ್ದೇ ನ್ಯಾಯ

ನಮ್ಮ ದೇಶದಲ್ಲಿ ಜನಗಳು ಕೆಟ್ಟು ಹೋಗ್ಬಾರದು ಎಂದು ' ವಭಿಚಾರ ನಿಷೇಧದ ಕಾನೂನು ' ಮಾಡಿದರು. ಅದೇನೋ ಚನ್ನಾಗಿಯೇ ಇತ್ತು. ಈಗ ಅದೇ ಸರಕಾರದವರು ಕಾನೂನು ಅನುಸರಿಸಿ ವ್ಯಭಿಚಾರ ಮಾಡಿಸುತ್ತಾ, ಇಧಾರೆ : ಅಂಥಾ ಕಾನೂನು ಬಂತು

ಬ್ರಹ್ಮಚರ್ಯೆ, ಏಕಪತ್ನೀವ್ರತ, ಪಾತಿವ್ರತ್ಯ ಇನೆಲ್ಲಾ ನಮ್ಮ ದೇಶದ ಮುಖ್ಯ ಆಚಾರಗಳು ಧರ್ಮಗಳು ಸಂಸ್ಕೃತಿಗೆ ಸೇರಿದವುಗಳು ಈಗ ಕಾಂಗ್ರೆಸ್ ಸರಕಾರ ಹುಟ್ಟಿದಾಗಿನಿಂದ ಇವೆಲ್ಲ ಕೆಟ್ಟಚಾಳಿಗಳಾಗಿವೆ ದುರ್ನಡತೆ ಯಾಗಿವೆ

' ಡೈವೋರ್ಸ್ ' ಮಾಡಬಹುದೆಂದು ಕಾನೂನಾಯಿತು : ಯಾರು ಯಾವಾಗ ಬೇಕಾದರೂ ಹೆಂಡತಿಯನ್ನು ಬಿಡಬಹುದು ಗಂಡನನ್ನು ಬಿಡಬಹುದು ಬೇರೆಯವರನ್ನು ಕಟ್ಟಿಕೊಳ್ಳಬಹುದು ಮತ್ತೊಮ್ಮೆ ಬೇಕಾದರೆ ಅವರನ್ನೂ ಬಿಡಬಹುದು ಇನ್ಯಾರನ್ನಾದರೂ ಕಟ್ಟಿಕೊಳ್ಳಬಹುದು ಎಷ್ಟು ಸಲ ಬೇಕಾದರೂ ಬಿಡೋದು ಕೂಡೋದು ನೂಡಬಹುದು ಇದು ವ್ಯಭಿಚಾರವಲ್ಲ ಕಾನೂನಿನಂತೆ ನಡೆಯುವುದು

ಅನಸೂಯ, ಅಹಲ್ಯಾ, ಸೀತಾ ಮೊದಲಾದವರು ಹಿಂದೆ ಆದರ್ಶ ಮಹಿಳೆಯರಾಗಿದ್ದರು ಇನ್ನು ಮುಂದೆ ಹಾಗಲ್ಲ ವಂದನೇ ನಂಬರ್ ಬಜಾರಿ ಹಾದರಗಿತ್ತಿಗಳೇ ಆದರ್ಶ !

' ಪತಿವ್ರತಾ ಶಿರೋಮಣಿ ' ಎಂದು ಹಿಂದೆ ಹೇಳುತ್ತಿದ್ದರು ಆದಕ್ಕೆ ಪ್ರಾಶಸ್ತ್ಯವಿತ್ತು ಇನ್ನು ಮುಂದೆ ಆದು ಬೇಡ ಆದರ ಬದಲು ' ಹಾದರಗಿತ್ತಿ ಶಿರೋಮಣಿ ' ಎಂದರಾಯಿತು

ಇದೇ ಹೊಸಯುಗದ ಶಾಸ್ತ್ರ ಬುದ್ಧರ್ಷೆ ಅಂಬೇಡಕರರು ಹೇಳಿದ್ದು ಮಾಡಿದ್ದು "ಮಲ್ಲ"

ರಣಜಿತ್

ಅಮೋಘ 2 ನೇ ವಾರ

ಶಬಿನ್ನಾನ್

ಮನಮೋಹನ ಹಿಂದಿ ಚಿತ್ರ

ಬೆಳಗಿನ ಪ್ರದರ್ಶನ 6—10—51 ರಿಂದ

ಮಿನಾ ನಾ ಬಜಾರ್

ಸಂಪುಟ ೧೭ ಸಂಚಿಕೆ ೭ ॥ ಶ್ರೀ ॥ ತಾ॥ 8-10-1951

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದ ಮಠಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

ಗೋ ಸಂರಕ್ಷಣೆ ಮಾಡಿರೆಂದು ಜಗದ್ಗುರುಗಳವರ ಉಪದೇಶ

ಡಾಕೋರ್ ಅ 5— ನಿನ್ನೆ ದಿವಸ ಇಲ್ಲಿ ನಡೆದ ಭಾರಿ ವಿಶೇಷ ಸಭೆಯಲ್ಲಿ ದ್ವಾರಕಾ ಶಾರದಾ ಪೀಠದ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರು, ಸಾರ್ವಜನಿಕರು ಗೋವುಗಳನ್ನು ಸರಿಯಾಗಿ ಸಾಕಿ ರಾಷ್ಟ್ರೀಯ ಸಂಪತ್ತನ್ನು ಹೆಚ್ಚಿಸಬೇಕೆಂದರು : ಹಿಂದೂ ಧರ್ಮ ಮತ್ತು ಅದರ ಅನುಯಾಯಿಗಳ ಮೇಲೆ ಮಾನ್ಯ ಜವಹರಲಾಲ್ ನೆಹರೂರವರು ಮಾಡಿರುವ ಹೇಳಿಕೆ ಒಗ್ಗೆ ಅಸಂತೃಪ್ತಿ ವ್ಯಕ್ತಪಡಿಸಿದರು ; ದೇಶದ ಏಳಿಗೆಯು ದೊರೆಯುವುದು ಧರ್ಮದಿಂದಲೇ ಹೊರತು ಅಧರ್ಮದಿಂದಲ್ಲವೆಂದೂ, ಮತ್ತು ಭಾರತದ ಮೇಲೆ ಶತಮಾನಗಳಿಂದ ಆಗಿರುವ ಹಲವಾರು ಧಾಳಿಗಳು ಧಾರ್ಮಿಕ ಭಾವವುಳ್ಳ ಜನರಿಂದ ನಡೆದುದೇ ಹೊರತು ಜಾತ್ಯತೀತ ಮುಖಂಡರುಗಳಿಂದಲ್ಲವೆಂದು ಶ್ರೀ ಜಗದ್ಗುರುಗಳವರು ತಿಳಿಸಿದರು. ಶ್ರೀ ಗಂಗಾಂಬಾ ಖಣ್ಣಾರವರೂ ಮಾತನಾಡಿದರು. ತಾ॥ 7 ರಂದು ಶ್ರೀ ಚಂದ್ರಮೌಳೇಶ್ವರ ಮಹೋತ್ಸವದ ಮಂಟಪ ಮುಹೂರ್ತಕ್ಕೂ, ಸ್ವಾಮಿ ಕರಪಾತ್ರಜೀಯವರ ಸೂಕ್ಷ್ಮ ಸ್ವಾಗತಕ್ಕೂ ತಕ್ಕ ಏರ್ಪಾಡುಗಳು ಮಾಡಲಾಗಿವೆ.

ಶ್ರೀ ಚಂದ್ರಮೌಳೇಶ್ವರ ಸ್ವಾಮಿಯ ಮಹೋತ್ಸವದ ವೈಭವ ಏರ್ಪಾಡು

ಸ್ವಂ. ಸು. ತಂತಿ | ಡಾಕೋರ್ ಅ 3

ಡಾಕೋರಿನಲ್ಲಿ ನಿನ್ನೆ ದಿವಸ ಶ್ರೀ ದ್ವಾರಕಾ ಶಾರದಾ ಪೀಠಾಧೀಶ್ವರ ಶ್ರೀ ಜಗದ್ಗುರು ಶಂಕರಾಚಾರ್ಯ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಜೀ ಮಹಾಸ್ವಾಮಿಗಳವರ ೩೩ ನೇ ಜನ್ಮದಿನೋತ್ಸವವು ಅತಿ ವೈಭವದಿಂದ ಆಚರಿಸಲಾಯಿತು. ಜಗದ್ಗುರುಗಳವರ ಭಾರಿ ವೆಂಡಣಿಗೆಯು ನಡೆಯಿತು. ಮೇವಾಡ ಬ್ರಾಹ್ಮಣರು ಮತ್ತು ಇತರ ಸಾರ್ವಜನಿಕರು ಪ್ರಚಂಡ ಸಭೆಯಲ್ಲಿ ಭಕ್ತಿಪೂರ್ವಕವಾಗಿ ಶ್ರೀ ಜಗದ್ಗುರುಗಳವರಿಗೆ ಅಭಿನಂದನೆ ಸಲ್ಲಿಸಿದರು ; ಶ್ರೀ ಶ್ರೀಗಳವರು ಎಲ್ಲರನ್ನೂ ಆಶೀರ್ವದಿಸಿ, ಎಲ್ಲರೂ ತಮ್ಮ ಧರ್ಮವನ್ನು ಖಡಾಖಂಡಿತವಾಗಿ ಆಚರಿಸಬೇಕೆಂದು ತಿಳಿಸಿದರು ; ಮತ್ತು ಪ್ರಪಂಚದಲ್ಲಿ ಶಾಂತಿಸಮೃದ್ಧಿ ನೆಲೆಸಲು ಭಗವಂತನಿಗೆ ಪ್ರಾರ್ಥನೆ ಸಲ್ಲಿಸಿದರು. ಇಲ್ಲಿ ತಾ॥ 7 ರಿಂದ 12 ರವರಿಗೆ ನಡೆಯುವ ಶ್ರೀ ಚಂದ್ರಮೌಳೇಶ್ವರ ಮಹೋತ್ಸವಕ್ಕೆ ವೈಭವ ಏರ್ಪಾಟು ನಡೆಯುತ್ತಿದೆ : ಮಹಾ ಸಂತ ಸ್ವಾಮಿ ಕರಪಾತ್ರಜೀಯವರು ಡಾಕೋರಿಗೆ ತಾ॥ 7 ಪ್ರಾತಃಕಾಲ ಆಗಮಿಸಿ, ಭಾರಿ ಸಭೆಗಳಲ್ಲಿ ಭಾಷಣಮಾಡುವರು ; ಶ್ರೀ ಗೋವರ್ಧನ ಮಠದ ಶ್ರೀ ಜಗದ್ಗುರು ಶಂಕರಾಚಾರ್ಯರವರೂ ಮತ್ತು ಇತರ ಮುಖಂಡರು ಆಗಮಿಸುವ ನಿರೀಕ್ಷಣೆಯಿದೆ.

ಶ್ರೀ ಜಗದ್ಗುರುಗಳವರ ಜನ್ಮದಿನೋತ್ಸವ

ಮೈಸೂರು ಅ 2— ಶ್ರೀ ದ್ವಾರಕಾ ಪೀಠಾಧೀಶ್ವರ ಜಗದ್ಗುರು ಶಂಕರಾಚಾರ್ಯ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಮಹಾಸ್ವಾಮಿಗಳವರ ೩೩ ನೇ ಜನ್ಮದಿನೋತ್ಸವವು 'ಸತ್ಯವಾದಿ' ಕಾರ್ಯಾಲಯದಲ್ಲಿ ಭಕ್ತಿಪೂರ್ವಕವಾಗಿ ಆಚರಿಸಲಾಯಿತು.

ಧರ್ಮ ಮತ್ತು ಭಗವಂತನ ವಿರುದ್ಧ ಚಳವಳಿ

[ಜಿ. ಆರ್. ಮಹಾಬಲಭಟ್ಟ, ವೇದಾಂತ ಶಿರೋಮಣಿ, ವೇದಾಂತ ವಿಶಾರದ
ದ್ವಾರಕಾ ಸಂಸ್ಥಾನ, ಮುಳುಬಾಗಿಲು ಮಠ]

(ಮುಂದುವರಿದದ್ದು)

ಸೃಷ್ಟಿಯ ವಿಕಾಸದಲ್ಲಿ ಧರ್ಮದ ವಿಕಾಸವೂ ಸೇರಿದೆ : ಜಡಪದಾರ್ಥದ ಸ್ವಾಭಾವಿಕವಾದ ಧರ್ಮವು ದೃಢವಾಗಿ ಅದರಲ್ಲಿ ಕುಳಿತಿದೆ. ಧರ್ಮದಿಂದಲೇ ಧರ್ಮಿಯು ಪರಿಚಯುವಾಗುವುದು ; ಚಿನ್ನದ ಧರ್ಮದಿಂದಲೇ ನಾವದನ್ನು ಚಿನ್ನವೆಂದರಿಯುವೆವು ; ಚಿನ್ನದಲ್ಲಿ ಕಾಣಿಸುವ ಬಿಳಿಯ ಧರ್ಮವನ್ನೂ, ಬಿಳಿಯಲ್ಲಿ ಕಾಣಿಸುವ ಚಿನ್ನದ ಧರ್ಮವನ್ನೂ 'ಸಾಮಾನ್ಯ ಧರ್ಮ' ವೆಂದು ಹೇಳುತ್ತೇವೆ. ಯಾವ ಧರ್ಮದಿಂದ ಅಥವಾ ಧರ್ಮಗಳಿಂದ ಚಿನ್ನವು ಬಿಳಿಗಿಂತ ಮತ್ತು ಇತರ ವಸ್ತುಗಳಿಗಿಂತ ಬೇರೆಯಾಗಿರುವುದೆಂದು ತಟ್ಟನೆ ತಿಳಿಯುತ್ತೇವೆಯೋ ಅದೇ 'ವಿಶೇಷ ಧರ್ಮ' ವೆಂದು ಹೇಳುತ್ತೇವೆ. ಉದ್ಭಿಜ್ಜದಲ್ಲಿ ಸಾಮಾನ್ಯ ಮತ್ತು ವಿಶೇಷ ಇವೆರಡು ತೆರಹದ ಧರ್ಮಗಳಿಗೆ ಮೂಲಕ್ಕಿಂತಲೂ ಹೆಚ್ಚಿನ ವಿಕಾಸವಿದೆ. ಯಾವ ಪರಿಸ್ಥಿತಿಗಳಲ್ಲಿದ್ದು ಸಸ್ಯವು ತನ್ನ ಧರ್ಮಗಳ ರಕ್ಷಣೆ ಮಾಡಲು ಶಕ್ತವಾಗುವುದಿಲ್ಲವೋ, ಅವುಗಳಿಂದ ಅದರ ವಿನಾಶವಾಗುವುದು. ಪ್ರಕೃತಿಯು ಸಸ್ಯದ ರಕ್ಷಣೆ ಅಂದರೆ ಅದರ ಧರ್ಮಗಳ ರಕ್ಷಣೆಗಾಗಿ ಸುಸಾಧ್ಯವಾದ ಉಪಾಯಗಳನ್ನು ಮಾಡಿಟ್ಟಿರುವುದು. ವನಸ್ಪತಿ ಸಂಸಾರವು ಈ ಉಪಾಯಗಳಿಂದ ಲಾಭ ಪಡೆಯುವುದು ; ಜಂತು ಮತ್ತು ಪಶು ಸಂಸಾರದ ಸಾಮಾನ್ಯ ಮತ್ತು ವಿಶೇಷ ಧರ್ಮಗಳೂ ಕೂಡ ಅವುಗಳ ಮೂಲಕ ಪಾಲನೀಯವಾಗಿವೆ ; ಕತ್ತೆಯು ಹುಲ್ಲು ಮೇಯುವುದು, ಸಿಂಹವು ಮಾಂಸತಿನ್ನುವುದು, ಇದು ಇವುಗಳ ವ್ಯಕ್ತಿ ಮತ್ತು ಜಾತಿರಕ್ಷಕವಾದ ಧರ್ಮವಾಗಿದೆ. ಒಂದು ಇನ್ನೊಂದರ ಧರ್ಮವನ್ನು ಸ್ವೀಕರಿಸುವುದಕ್ಕೂ, ತನ್ನ ಧರ್ಮ ಬಿಡುವುದಕ್ಕೂ ಶಕ್ಯವಿಲ್ಲ ; ತನ್ನ ತನ್ನ ಧರ್ಮದ ರಕ್ಷಣೆಯನ್ನು ಮಾಡಿಕೊಳ್ಳದೇಹೋದರೆ ಸತ್ತುಹೋಗುವುದು.

ಹಾಗೆಯೇ ಮನುಷ್ಯನ ಧರ್ಮಗಳೂ ಇವೆ ಮನುಷ್ಯನು ರಾಷ್ಟ್ರಗಳಲ್ಲಿ, ಸಮಾಜಗಳಲ್ಲಿ, ವರ್ಣಗಳಲ್ಲಿ ವಿಭಕ್ತನಾಗಿರುವನು. ದೇಶ, ಕಾಲ, ಕರ್ಮ ಮತ್ತು ಸ್ವಭಾವಗಳನ್ನನುಸರಿಸಿ ಎಲ್ಲಾ ಧರ್ಮಗಳೂ ಬೇರೆಯಾಗಿವೆ. ಆಹಾರ, ನಿದ್ರಾ, ಭಯ, ಮೈಥುನಗಳು ಸ್ವಾಭಾವಿಕ ಧರ್ಮಗಳು ಮತ್ತು ವ್ಯಾಪಕ ಧರ್ಮಗಳು. ಆಚಾರರೀತಿಯು ಧರ್ಮಗಳು ಉನ್ನತಿಯ ದೃಷ್ಟಿಯಿಂದ ಋಷಿ ಮುನಿಗಳಾದವರಿಂದ ನಡೆಸಲ್ಪಟ್ಟಿವೆ. ಇವು ಸಹಜಗಳಲ್ಲ. ಮತ್ತೇನೆಂದರೆ ಇವುಗಳಿಂದ ವಿಕಾಸ ಮಾರ್ಗವು ಪ್ರಶಸ್ತವಾಗುವುದು. 'ಯತೋಭ್ಯುದಯ ನಿಶ್ರೇಯಸ ಸಿದ್ಧಿಃ' 'ಯಾವುದರಿಂದ ಅಭ್ಯುದಯನಿಶ್ರೇಯಸದ ಸಿದ್ಧಿಯಾಗುವುದೋ ಅದೇ ಧರ್ಮವು'

ಇದು ವೈಜ್ಞಾನಿಕ ಪರಿಭಾಷೆಯು. ಇದರ ಒರೆಗಲ್ಲಿನ ಮೇಲೆಯೇ ತಿಕ್ಕಿ ಸದಾಚಾರವನ್ನು ಧರ್ಮವೆಂದು ಒಪ್ಪಲು ಶಕ್ಯವಿದೆ. ಸದಾಚಾರದಿಂದ ನಮ್ಮ ಅಭ್ಯುದಯವಾಗುವುದಾದರೆ, ಆ ಧರ್ಮವನ್ನು ಅಗತ್ಯವಾಗಿ ಪಾಲಿಸಬೇಕು. ಇದರ ರಕ್ಷಣೆ ಮಾಡುವದರಿಂದ ನಮ್ಮ ರಕ್ಷಣೆಯಾಗುವುದು ಸದಾಚಾರವು ಧರ್ಮಕ್ಕೆ ಮೂಲವಾಗಿದೆ. 'ಆಚಾರಪ್ರಭವೋ ಧರ್ಮಃ' ಆದರಿಂದಲೇ ಧರ್ಮದ ರಕ್ಷಣೆ ಮಾಡಿರಿ. ಸದಾಚಾರವನ್ನು ರಕ್ಷಿಸಿದರೆ ಅದು ನಿಮ್ಮನ್ನು ರಕ್ಷಿಸುವುದು. 'ಧರ್ಮೋ ರಕ್ಷತಿ ರಕ್ಷಿತಃ' ಸದಾಚಾರವು ದಾರ್ಢ್ಯಪೂರ್ವಕವಾಗಿ ಧಾರಣೆ ಮಾಡಬೇಕಾದ ವಸ್ತುವಾಗಿದೆ. ಆದ್ದರಿಂದಲೆ ಧರ್ಮವು. ಇದರಿಂದ ಶಾರೀರಕ, ಮಾನಸಿಕ ಮತ್ತು ಆಧ್ಯಾತ್ಮಿಕ ಮೊದಲಾದ ತರಹದ ವಿಕಾಸವುಂಟಾಗುವುದು. ಸದಾಚಾರವು ಸಂದೇಹದಲ್ಲಿ ಬಿದ್ದಿರುವ ವಿಕಾಸವೂ ಸಂದೇಹದಲ್ಲಿ ಬಿದ್ದಂತಾಗುವುದು. ಆದ್ದರಿಂದಲೇ ಸದಾಚಾರವನ್ನು ರಕ್ಷಿಸಬೇಕು ಯಾವ ಅನೀಶ್ವರವಾದಿಯೂ ಕೂಡ ಇದಕ್ಕೆ ವಿರೋಧವಾಗದೆ ಇರುವುದಿಲ್ಲ. — ಸಶೇಷ

Edited, Printed and Published by Dharma Prachara Nirata M. S. Krishna Rao. at the Satyavadi Press Chamarajapuram Mysore